CW-6/ PW-10

**ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ**

**CC No : 244/2018**

| | | |
|---|---|---|
| ಸಾಕ್ಷಿದಾರರ ಹೆಸರು | : | ಚೈತನ್ಯ ಕೆ ಎಂ |
| ತಂದೆಯ ಹೆಸರು | : | ಮರಿಸ್ವಾಮಿ ಬಿ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪಿ ಐ, ಜೆ ಸಿ ನಗರ, ಬೆಂಗಳೂರು |
| ವಾಸಸ್ಥಳ | : | ಬೆಂಗಳೂರು |

ಸಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ: ದಿಃ. 19.07.2025

ನಾನು ದಿಃ 26.09.2016 ರಿಂದ 07.10.2017 ರವರೆಗೆ ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 21.06.2017 ರಂದು ನಾನು ಕೇಸಿನ ಕಡತವನ್ನು ಚಾಸಾ 9 ರವರಿಂದ ಪಡೆದುಕೊಂಡಿರುತ್ತೇನೆ. ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು, ಬೆಳಿಗ್ಗೆ 11.00 ರಿಂದ 11.30 ರವರೆಗೆ ಚಾಸಾ 3, 5 ಮತ್ತು 6 ರವರ ಸಮಕ್ಷಮ ಮಹಜರು ಕ್ರಮ ಜರುಗಿಸಿರುತ್ತೇನೆ. ಕೃತ್ಯ ನಡೆದ ಸ್ಥಳದಲ್ಲಿ ಅರ್ಧ ಇಟ್ಟಿಗೆ ಮತ್ತು ಚಾಕುವನ್ನು ಪಂಚರರ ಸಮಕ್ಷಮ ವಶಕ್ಕೆ ಪಡೆದುಕೊಂಡಿರುತ್ತೇನೆ. ಸ್ಥಳ ಮಹಜರನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದ್ದು, ಮಹಜರಿನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 3 (ಬಿ)

ಎಂದು ಗುರುತಿಸಲಾಯಿತು. ಮಹಜರು ಕ್ರಮಮುಗಿಸಿ ಠಾಣೆಗೆ ಹಾಜರಾಗಿ ಮಹಜರು ಕಾಲಕ್ಕೆ ವಶಪಡಿಸಿಕೊಂಡು ಇಟ್ಟಿಗೆ ಮತ್ತು

ಚಾಕುವನ್ನು ನಮ್ಮ ಮಾಲು ಪಟ್ಟಿ ಸಂಃ 46/2017 ರಲ್ಲಿ ನಮೂದಿಸಿಕೊಂಡಿರುತ್ತೇನೆ. ಮಾಲುಪಟ್ಟಿಯನ್ನು ನಿಪಿ6 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 6 (ಎ) ಎಂದು ಗುರುತಿಸಲಾಯಿತು. ಚಾಸಾ1 ರವರ 164 ಸಿ ಆರ್ ಪಿಸಿ ಹೇಳಿಕೆಯನ್ನು ನ್ಯಾಯಾಲಯದಿಂದ ಪಡೆದು ತನಿಖೆ ಕೈಗೊಂಡಿರುತ್ತೇನೆ.

ದಿಃ 20.06.2017 ರಂದು ಚಾಸಾ 2 ಮತ್ತು 3 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕೇಸಿನ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ 4 ಮತ್ತು 5 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಗಳನ್ನು ನಿ ಪಿ 4 (ಬಿ) ಮತ್ತು 5 (ಬಿ) ಎಂದು ಗುರುತಿಸಲಾಯಿತು. ದಿಃ 22.06.2017 ರಂದು ಸಾಕ್ಷಿದಾರರಾದ ಚಾಸಾ 2, 3, 4 ಮತ್ತು 5 ರವರ ಹೇಳಿಕೆಗಳನ್ನು ಪಡೆದು ಕೇಸಿನ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿತರ ವಿರುದ್ಧ ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಆತನ ವಿರುದ್ದ ಅಂತಿಮ ವರದಿಯನ್ನು ದಿಃ 24.08.2017 ರಂದು ಸಲ್ಲಿಸಿರುತ್ತೇನೆ. ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಮುಮಾ 1 ಮತ್ತು 2 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಂ ಕೆ ಎನ್ ಪರ ಕುಮಾರಿ ಸಿ ಎಸ್ ಡಿ ವಕೀಲರಿಂದಃ</u>**

ಘಟನೆ ನಡೆಯಿತು ಎಂದು ಹೇಳಿದ ಸ್ಥಳ್ಕೆ ಬೇಟಿ ಕೊಟ್ಟು ಪಂಚರರ ಮತ್ತು ಸಾಕ್ಷಿದಾರರ ಸಮಕ್ಷಮ ಮುಮಾ 1 ಮತ್ತು 2 ನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಹೇಳಿದ್ದು, ಚಾಸಾ 3 , 5 ಮತ್ತು 6 ರವರಿಗೆ ಲಿಖಿತ ನೋಟೀಸು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಮೌಖಿಕವಾಗಿ ಅವರಿಗೆ ತಿಳಿಸಿದ್ದು, ಅವರು ಸಾಕ್ಷಿದಾರರಾಗಿ ಬರಲು ಒಪ್ಪಿದ ನಂತರ ಮಹಜರು ಮಾಡಿರುವುದಾಗಿ ನುಡಿಯುತ್ತಾರೆ. ಮಹಜರು ಕ್ರಮ ಜರುಗಿಸಿದ ಆಸ್ತಿಯ ನಂಬರ್ ಏನು ಎಂದು ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಮಹಜರು ಕಾಲಕ್ಕೆ ಪೋಟೋ ತೆಗೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಘಟನೆ ನಡೆಯಿತು ಎಂದು ಹೇಳಿದ ಸ್ಥಳಕ್ಕೆ ನಾನು ಹೋಗಿಲ್ಲ , ಪಂಚರರ ಸಮಕ್ಷಮ ಅಮಾನತ್ತು ಮಾಡಿ ಮುಮಾ 1 ಮತ್ತು 2 ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಬದಲಾಗಿ ನಾನು ಠಾಣೆಯಲ್ಲಿಯೇ ಕುಳಿತು ಪಂಚನಾಮೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 2 ರಿಂದ 5 ರವರ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಕೋರಿಕೆಯ ಮೇರೆಗೆ ಸಾರ್ವಜನಿಕ ಆಸ್ಪತ್ರೆಯ ವೈದ್ಯರು ಚಾಸಾ 1 ಮತ್ತು 2 ರವರ ಗಾಯದ ಪ್ರಮಾಣ ಪತ್ರಗಳನ್ನು ಸೃಷ್ಟಿ ಮಾಡಿಕೊಟ್ಟಿರುತ್ತಾರೆ ಎಂದರ ಸರಿಯಲ್ಲ. ಆರೋಪಿತರ ವಿರುದ್ದ ಯಾವುದೇ ಸಾಕ್ಷ್ಯಾಧಾರಗಳು ಕಂಡು ಬರದೇ ಇದ್ದರೂ ಅವರ ವಿರುದ್ದ ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.